All India Radio: Bangalore

National Bulletin In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

03.07.2025 1.10 P.M.

<><><><>

ಮುಖ್ಯಾಂಶಗಳು :

- ಘಾನ ಸಂಸತ್ ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಇಂದು ಭಾಷಣ
- ಇದೇ ೨೧ರಿಂದ ಸಂಸತ್ತಿನ ಮಳೆಗಾಲದ ಅಧಿವೇಶನ ಆರಂಭ
- ದೆಹಲಿಯಲ್ಲಿಂದು ಪ್ರಸಾರ ಮತ್ತು ಮಾಧ್ಯಮ ತಂತ್ರಜ್ಞಾನ - ಬಿಇಎಸ್ ಎಕ್ಸ್‌ಪೋ ಗೆ ಚಾಲನೆ ನೀಡಲಿರುವ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್
- ಪಾಕಿಸ್ತಾನದ ಹಲವು ನಟ-ನಟಿಯರು, ಕ್ರಿಕೆಟ್ ಪಟುಗಳ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಮತ್ತೊಮ್ಮೆ ನಿಷೇಧಿಸಿದ ಕೇಂದ್ರ ಸರ್ಕಾರ
- ಭಾರತ -ಇಂಗ್ಲೆಂಡ್ ನಡುವಿನ ಎರಡನೇ ಟೆಸ್ಟ್ ಕ್ರಿಕೆಟ್ ಪಂದ್ಯ : ಇಂದು ಎರಡನೇ ದಿನದಾಟ ಮುಂದುವರಿಕೆ

<><><><>

ಘಾನ ಪ್ರವಾಸದಲ್ಲಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇಂದು ಅಲ್ಲಿನ ಸಂಸತ್ತನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಅದಕ್ಕೂ ಮುನ್ನ ಅವರು ಅಲ್ಲಿನ ಭಾರತೀಯ ಸಮುದಾಯದೊಂದಿಗೆ ಸಂವಾದ ನಡೆಸಲಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಅಕ್ರಾದಲ್ಲಿರುವ ಎನ್‌ಕ್ರುಮಾ ಸ್ಮಾರಕಕ್ಕೂ ಭೇಟಿ ನೀಡಲಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಕಳೆದ ರಾತ್ರಿ ಘಾನಗೆ ಆಗಮಿಸಿದರು. ಅವರಿಗೆ ವಿಮಾನ ನಿಲ್ದಾಣದಲ್ಲಿ ಅಧ್ಯಕ್ಷ ಜಾನ್ ದ್ರಮಣಿ ಮಹಾಮ ಅವರು ಸಾಂಪ್ರದಾಯಿಕ ರೀತಿಯಲ್ಲಿ ಸ್ವಾಗತಿಸಿದರು. ನಂತರ ಪ್ರಧಾನಿ ಅವರು ನಿಯೋಗ ಮಟ್ಟದ ಮಾತುಕತೆಗಳನ್ನು ನಡೆಸಿದರು. ಆನಂತರ ಜಂಟಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಭಾರತ ಮತ್ತು ಘಾನ ಸಹಭಾಗಿತ್ವವನ್ನು ಸಮಗ್ರ ಪಾಲುದಾರಿಕೆ ರೂಪಕ್ಕೆ ವಿಸ್ತರಿಸಲು ನಿರ್ಧರಿಸಿವೆ ಎಂದು ಪ್ರಕಟಿಸಿದರು.

ಧ್ವನಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ( ೩೫ ಸೆಕೆಂಡುಗಳು)

ಉಭಯ ದೇಶಗಳು ಹಾಲಿ ಇರುವ ತನ್ನ ವ್ಯಾಪಾರ , ಬಂಡವಾಳ ಹೂಡಿಕೆ , ಕೃಷಿ, ಡಿಜಿಟಲ್ ತಂತ್ರಜ್ಞಾನ , ಸಾಮರ್ಥ್ಯ ವೃದ್ಧಿ, ಮೂಲಸೌಕರ್ಯ ಮತ್ತು ಜನರ ನಡುವಿನ ಸಂಬಂಧಗಳ ಬಗ್ಗೆ ಚರ್ಚಿಸಿದವು. ಘಾನದಲ್ಲಿ ಭಾರತದ ಹೂಡಿಕೆಯನ್ನು ಸ್ವಾಗತಿಸಲಾಯಿತು ಮತ್ತು ರಕ್ಷಣಾ ಹಾಗೂ ಭದ್ರತಾ ಸಹಕಾರದ ಬಗ್ಗೆ ಸಮಾಲೋಚನೆ ನಡೆಸಲಾಯಿತು ಎಂದು ಹೇಳಿದರು. ಮಾತುಕತೆಯ ಬಳಿಕ ಸಂಸ್ಕೃತಿ, ಆಯುರ್ವೇದ ಹಾಗೂ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ ಸೇರಿದಂತೆ ವಿವಿಧ

ಅಂಶಗಳನ್ನು ಒಳಗೊಂಡ ನಾಲ್ಕು ಒಡಂಬಡಿಕೆಗಳಿಗೆ ಸಹಿ ಹಾಕಲಾಯಿತು. ಆನಂತರ ಅಧ್ಯಕ್ಷ ಮಹಾಮ ಅವರು ಪ್ರಧಾನಿ ಅವರಿಗೆ ರಾಷ್ಟ್ರೀಯ ಗೌರವವನ್ನು ಸಲ್ಲಿಸಿದರು.

<><><>

ಪಂಚರಾಷ್ಟ್ರಗಳ ಪ್ರವಾಸದಲ್ಲಿರುವ ಪ್ರದಾನಮಂತ್ರಿ ನರೇಂದ್ರ ಮೋದಿ ಅವರಿಂದು ತಮ್ಮ ಪ್ರವಾಸದ ಎರಡನೇ ಚರಣದಲ್ಲಿ ಟ್ರಿನಿಡಾಡ್ ಮತ್ತು ಟೋಬ್ಯಾಗೋ ಗೆ ಭೇಟಿ ನೀಡಲಿದ್ದಾರೆ. ಅಲ್ಲಿ ಅವರು ಅಧ್ಯಕ್ಷ ಕ್ರಿಸ್ಟಿನ್ ಕಾರ್ಲಾ ಕಾಂಗಲೂ ಮತ್ತು ಪ್ರಧಾನಮಂತ್ರಿ ಕಮ್ಲಾ ಪೆರ್ಸಾದ್ - ಬಿಸೆಸ್ಸಾರ್ ಅವರನ್ನು ಭೇಟಿ ಮಾಡಲಿದ್ದಾರೆ ಮತ್ತು ದ್ವಿಪಕ್ಷೀಯ ಸಂಬಂಧಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಟ್ರಿನಿಡಾಡ್ ಮತ್ತು ಟೋಬ್ಯಾಗೋ ಗೆ ಭಾರತೀಯ ವಲಸಿಗರು ಭೇಟಿ ನೀಡಿ ೧೮೦ ವರ್ಷಗಳು ಪೂರೈಸಿರುವ ಹಿನ್ನೆಲೆಯಲ್ಲಿ ಪ್ರಧಾನಿ ಅವರ ಈ ಭೇಟಿ ಅತ್ಯಂತ ಮಹತ್ವದ್ದೆಂದು ಪರಿಗಣಿಸಲಾಗಿದೆ. ಉಭಯ ದೇಶಗಳ ನಾಯಕರು ಡಿಜಿಟಲ್ ಪರಿವರ್ತನೆ, ಆಹಾರ ಸಂಸ್ಕರಣೆ, ವ್ಯಾಪರ , ಆರೋಗ್ಯ, ಸಾಗರ ಭದ್ರತೆ, ಸಾರಿಗೆ ಮತ್ತು ಒಟ್ಟಾರೆ ಆರ್ಥಿಕ ಮತ್ತು ಸಾಂಸ್ಕೃತಿಕ ಸಹಕಾರದ ಬಗ್ಗೆ ಚರ್ಚೆ ನಡೆಸುವ ಸಾಧ್ಯತೆ ಇದೆ. ಅಲ್ಲದೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಟ್ರಿನಿಡಾಡ್ ಮತ್ತು ಟೋಬ್ಯಾಗೋ ಸಂಸತ್ತನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ ಮತ್ತು ಅನಿವಾಸಿ ಭಾರತೀಯರೊಂದಿಗೆ ಸಂವಾದ ನಡೆಸಲಿದ್ದಾರೆ.

<><><>

ವಾಣಿಜ್ಯೇತರ ಉದ್ದೇಶಗಳಿಗೆ ಸಾರ್ವಜನಿಕರು ಪಡೆದಿರುವ ಸಾಲಗಳ ಮರುಪಾವತಿ ಮೇಲೆ ಬ್ಯಾಂಕುಗಳು ಹಾಗೂ ಇತರೆ ಸಾಲದಾತರು ಪೂರ್ವಪಾವತಿ ದಂಡ ವಿಧಿಸುವುದನ್ನು ಆರ್‌ಬಿಐ ನಿಷೇಧಿಸಿದೆ. ಅದಕ್ಕಾಗಿ ಮುಂದಿನ ವರ್ಷದಿಂದ ಅನ್ವಯವಾಗುವಂತೆ ಸಾಲ ನಿರ್ದೇಶನಗಳಿಗೆ ಪೂರ್ವಪಾವತಿ ಶುಲ್ಕದ ಕುರಿತು ಹೊಸ ನಿಯಮ ಜಾರಿಗೆ ಬರಲಿದೆ. ಅದರಲ್ಲಿ ಪಾರದರ್ಶಕತೆಗೆ ಉತ್ತೇಜನ ಮತ್ತು ಸಾಲಗಾರರಿಗೆ ಸರಳ ನಿಯಮಗಳನ್ನು ಅಳವಡಿಸಿಸುವ ಗುರಿಯಿದೆ. ಈ ನಿರ್ದೇಶನ ಪಾವತಿ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಎನ್‌ಬಿಎಫ್‌ಸಿ ಹಾಗೂ ಅಖಿಲ ಭಾರತ ಹಣಕಾಸು ಸಂಸ್ಥೆಗಳನ್ನು ಹೊರತು ಪಡಿಸಿ ಎಲ್ಲಾ ವಾಣಿಜ್ಯ ಬ್ಯಾಂಕುಗಳಿಗೆ ಅನ್ವಯವಾಗಲಿದೆ.

<><><>

ಜುಲೈ ೨೧ ರಿಂದ ಆಗಸ್ಟ್ ೨೧ ರವರೆಗೆ ಸಂಸತ್ತಿನ ಮಳೆಗಾಲದ ಅಧಿವೇಶನ ನಡೆಯಲಿದೆ. ಅಧಿವೇಶನ ಕರೆಯುವ ಸರ್ಕಾರದ ಪ್ರಸ್ತಾವನೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದಿಸಿದ್ದಾರೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ. ಸ್ವಾತಂತ್ರ್ಯ ದಿನಾಚರಣೆಯ ಹಿನ್ನೆಲೆಯಲ್ಲಿ ಆಗಸ್ಟ್ ೧೩ ಮತ್ತು ೧೪ ರಂದು ಯಾವುದೇ ಅಧಿವೇಶನ ಇರುವುದಿಲ್ಲ ಎಂದು ಅವರು ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಮಾಹಿತಿ ನೀಡಿದ್ದಾರೆ.

<><><>

ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ದೆಹಲಿಯಲ್ಲಿಂದು ಪ್ರಸಾರ ಮತ್ತು ಮಾಧ್ಯಮ ತಂತ್ರಜ್ಞಾನ - ಬಿಇಎಸ್ ಎಕ್ಸ್‌ಪೋ ಗೆ ಚಾಲನೆ ನೀಡಲಿದ್ದಾರೆ. ಅಂತಾರಾಷ್ಟ್ರೀಯ ಸಮಾವೇಶ ಮತ್ತು ವಸ್ತು ಪ್ರದರ್ಶನದ ಘೋಷವಾಕ್ಯ - ಕೃತಕ ಬುದ್ಧಿಮತ್ತೆ ಮೂಲಕ ಮಾಧ್ಯಮ ಆಯಾಮ ಪರಿವರ್ತನೆ ಎಂಬುದಾಗಿದೆ. ಮೂರು ದಿನಗಳ ಈ ಸಮಾವೇಶದಲ್ಲಿ ಪ್ರಸಾರಕರು, ಮಾಧ್ಯಮ ಉದ್ಯಮ ವೃತ್ತಿಪರರು ಮತ್ತು ದೇಶ-ವಿದೇಶಗಳ ಭಾಷಣಕಾರರು ಪ್ರಸಾರಕ್ಕೆ ಸಂಬಂಧಿಸಿದಂತೆ ಅತ್ಯಾಧುನಿಕ ಬೆಳವಣಿಗೆಗಳ ಕುರಿತು ಸಮಾಲೋಚನೆ ನಡೆಸುವರು ಮತ್ತು ಉಪನ್ಯಾಸಗಳನ್ನು ನೀಡಲಿದ್ದಾರೆ. ಜೊತೆಗೆ, ಪ್ರಸಾರಕ್ಕೆ ಸಂಬಂಧಿಸಿದ ಅತ್ಯಾಧುನಿಕ ಸಾಧನಗಳು ಹಾಗೂ ತಂತ್ರಜ್ಞಾನಗಳ ಪ್ರದರ್ಶನವೂ ನಡೆಯಲಿದೆ.

<><><><>

೩೮ ದಿನಗಳ ವಾರ್ಷಿಕ ಪವಿತ್ರ ಅಮರನಾಥ ಯಾತ್ರೆ ಇಂದಿನಿಂದ ಆರಂಭವಾಗಿದೆ. ಯಾತ್ರೆ ಇಂದು ದಕ್ಷಿಣ ಕಾಶ್ಮೀರದ ಪಹಲ್ಗಾಮ್ ಮತ್ತು ಮಧ್ಯ ಕಾಶ್ಮೀರದ ಗಂಡೇರ್‌ಬಾಲ್ ಜಿಲ್ಲೆಯ ಬಾಲ್ತಾಲ್ ಜೋಡಿ ಮಾರ್ಗಗಳಿಂದ ಬಿಗಿ ಭದ್ರತೆಯ ನಡುವೆ ಆರಂಭವಾಯಿತು. ಎರಡು ಮಾರ್ಗಗಳಲ್ಲಿ ಯಾತ್ರಾರ್ಥಿಗಳ ಸಂಚಾರಕ್ಕೆ ಇಂದು ಬೆಳಗ್ಗೆಯಿಂದ ಅವಕಾಶ ಕಲ್ಪಿಸಲಾಗಿದೆ. ಕಾಶ್ಮೀರ ಪ್ರದೇಶದ ಹಿಮಾಲಯದಲ್ಲಿ ೧೨ ಸಾವಿರದ ೭೫೬ ಅಡಿ ಎತ್ತರದಲ್ಲಿರುವ ಅಮರನಾಥ ಗುಹೆಯಲ್ಲಿ ಹಿಮದ ಶಿವಲಿಂಗ ರೂಪುಗೊಳ್ಳುವುದನ್ನು ನೋಡಲು ಭಕ್ತಾದಿಗಳು ಆಗಮಿಸುತ್ತಿದ್ದಾರೆ. ನಿನ್ನೆ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಜಮ್ಮುವಿನ ಭಗವತೀ ನಗರದ ಶಿಬಿರದಲ್ಲಿ ಯಾತ್ರೆಗೆ ಹಸಿರು ನಿಶಾನೆ ತೋರಿದರು. ಬಲ್ತಾಲ್ ಮಾರ್ಗದ ಕಡೆಗೆ ೨ ಸಾವಿರದ ೩೦೦ ಕ್ಕೂ ಹೆಚ್ಚು ಯಾತ್ರಿಕರನ್ನು ಹೊತ್ತ ಸುಮಾರು ೨೯೯ ವಾಹನಗಳು ಮತ್ತು ಪಹಲ್ಗಾಮ್ ಮಾರ್ಗದ ಕಡೆಗೆ ೩ ಸಾವಿರಕ್ಕೂ ಕ್ಕೂ ಹೆಚ್ಚು ಯಾತ್ರಿಕರು ಶ್ರೀನಗರ ಜಮ್ಮು ರಾಷ್ಟ್ರೀಯ ಹೆದ್ದಾರಿಯ ಮೂಲಕ ಕಾಶ್ಮೀರ ಪ್ರದೇಶವನ್ನು ಸುರಕ್ಷಿತವಾಗಿ ತಲುಪಿದ್ದಾರೆ. ಈ ಬಗ್ಗ ಎನಮ್ಮ ಪ್ರತಿನಿಧಿ ಹೆಚ್ಚಿನ ವಿವರ ನೀಡಿದ್ದಾರೆ.

ಧ್ವನಿ : ತಾರೀಖ್ (೪೩ ಸೆಕೆಂಡುಗಳು )

<><><><>

ಪಾಕಿಸ್ತಾನದ ಹಲವು ನಟ-ನಟಿಯರು ಮತ್ತು ಕ್ರಿಕೆಟ್ ಪಟುಗಳ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಕೇಂದ್ರ ಸರ್ಕಾರ ದೇಶದಲ್ಲಿ ಮತ್ತೊಮ್ಮೆ ನಿಷೇಧಿಸಿದೆ. ಕಳೆದ ಮೇ ತಿಂಗಳಲ್ಲಿ ಭಾರತ್ ವಿರೋಧಿ ಅಭಿಪ್ರಾಯಗಳನ್ನು ಮತ್ತು ಪ್ರಚೋದನಕಾರಿ ಅಂಶಗಳನ್ನು ಪ್ರಸಾರ ಮಾಡುತ್ತಿದ್ದ ಪಾಕಿಸ್ತಾನದ ಯೂಟ್ಯೂಬ್ ಚಾನಲ್‌ಗಳು ಹಾಗೂ ಸಾಮಾಜಿಕ ಮಾಧ್ಯಮ ಖಾತೆಗಳನ್ನು ನಿಷೇಧಿಸಿತ್ತು. ಆದರೆ ತಾಂತ್ರಿಕ ಕಾರಣಗಳಿಂದಾಗಿ ಅವು ಲಭ್ಯವಾಗುತ್ತಿದ್ದವು ಹಾಗಾಗಿ ಇದೀಗ ಮತ್ತೊಮ್ಮೆ ತಾರೆಗಳಾದ ಸಭಾಕಮರ್, ಅಹದ್ ರಜಾ ಮಿರ್, ಯಮುನಾ ಜೈದಿ

ಮತ್ತು ದಾನೀಷ್ ತೈಮುರ್ ಹಾಗೂ ಕ್ರಿಕೆಟರ್ ಗಳಾದ ಶಾಹೀದ್ ಅಫ್ರೀದಿ ಮತ್ತು ಶೋಯಬ್ ಆಖ್ತರ್ ಅವರ ಇನ್ಸ್ಟಾಗ್ರಾಂ ಖಾತೆಗಳನ್ನು ಸಹ ನಿಷೇಧಿಸಲಾಗಿದೆ.

<><><><>

ಬರ್ಮಿಂಗ್ಹ್ಯಾಮ್‌ನ ಎಜ್‌ಬಾಸ್ಟನ್‌ನಲ್ಲಿ ನಡೆಯುತ್ತಿರುವ ಭಾರತ-ಇಂಗ್ಲೆಂಡ್ ನಡುವಿನ ಆಂಡರ್ಸನ್-ತೆಂಡೂಲ್ಕರ್ ಟ್ರೋಫಿ ಸರಣಿಯ ಎರಡನೇ ಟೆಸ್ಟ್‌ನ ಎರಡನೇ ದಿನದಾಟ ಮಧ್ಯಾಹ್ನ ೩.೩೦ಕ್ಕೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>